KACM210003472023

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿಸಿ. ನಂ.146/2023**

ಫಿರ್ಯಾದಿ : ಪಂಚನಹಳ್ಳಿ ಪೊಲೀಸ್ ಠಾಣೆ

ವಿರುದ್ದ

ಆರೋಪಿಗಳು :

1. ಟಿ.ಬಿ. ದಿನೇಶ್, ಬಿನ್ ಬಸವರಾಜಪ್ಪ,
ವಯಸ್ಸು ಸುಮಾರು 36 ವರ್ಷ,
ರಾಜಕಾರಣಿ,

2. ಚನ್ನಬಸಪ್ಪ ಟಿ.ಎನ್., ಬಿನ್ ನಾಗರಾಜಪ್ಪ,
ವಯಸ್ಸು ಸುಮಾರು 39 ವರ್ಷ, ವ್ಯವಸಾಯ ವೃತ್ತಿ,

3. ರಮೇಶ ಟಿ.ಯು., ಬಿನ್ ಉಜ್ಜನಪ್ಪ,
ವಯಸ್ಸು ಸುಮಾರು 44 ವರ್ಷ, ವ್ಯವಸಾಯ ವೃತ್ತಿ,

ಆರೋಪಿತರೆಲ್ಲರ ವಾಸಃ ತಿಮ್ಲಾಪುರ ಗ್ರಾಮ,
ಕಡೂರು ತಾಲ್ಲೂಕು, ಚಿಕ್ಕಮಗಳೂರು.

## ಃದೋಷಾರೋಪಣೆಃ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ.

ಮೊದಲನೇಯದಾಗಿ, ದಿನಾಂಕಃ 21.10.2022 ರಂದು ಬೆಳಿಗ್ಗೆ 8-30 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಪಂಚನಹಳ್ಳಿ ಪೋಲಿಸ್ ಠಾಣಾ ಸರಹದ್ದಿನ ತಿಮ್ಮಲಾಪುರ ಗ್ರಾಮದ ಶ್ರೀ ಗಿರಿಯಪ್ಪರವರ ಮನೆಯ ಮುಂಭಾಗದ ಮಣ್ಣಿನ ರಸ್ತೆಯಲ್ಲಿ ಚಾಸಾ-1 ರವರು ತಮ್ಮ ಮನೆಯಲ್ಲಿ ಸ್ಕೂಟಿಯನ್ನು ನಿಲ್ಲಿಸಿದ್ದರು ಎಂಬ ಕಾರಣಕ್ಕೆ

KACM210003472023

ಆರೋಪಿತರು ಸಮಾನ ಉದ್ದೇಶದಿಂದ ಬಂದು ಆರೋಪಿತರು ಪೈಕಿ 1 ನೇ ಆರೋಪಿಯಾದ ನೀವು ಸ್ಕೂಟಿಯನ್ನು ಕಾಲಿನಿಂದ ಒದ್ದು ಕೆಳಗೆ ಕೆಡವಿದನ್ನು ನೋಡಿದ ಚಾಸಾ-1 ರವರು 1 ನೇ ಆರೋಪಿಯಾದ ನಿಮ್ಮನ್ನು ಉದ್ದೇಶಿಸಿ ನನ್ನ ಸ್ಕೂಟಿ ಸ್ಟಾರ್ಟ್ ಆಗುತ್ತಿರಲಿಲ್ಲ ಅದಕ್ಕೆ ಅದನ್ನು ಅಲ್ಲಿ ನಿಲ್ಲಿಸಿ ಒಳಗೆ ಹೋಗಿದ್ದೆ ನನಗೆ ಹೇಳಿದರೆ ಬೈಕ್ ತೆಗೆಯುತ್ತಿದ್ದೆ, ಯಾಕೆ ಕಾಲಿನಿಂದ ಒದ್ದು ಕೆಳಗೆ ಕೆಡವಿದೆ ಎಂದು ಕೇಳಿದ್ದಕ್ಕೆ 1 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ಕುರಿತು ಸೂಳೆಮಗನೆ, ಬೋಳಿಮಗನೆ ಯಾಕೋ ರಸ್ತೆಯಲ್ಲಿ ಬೈಕ್ ನಿಲ್ಲಿಸೋದು ಎಂದು ಅವಾಚ್ಯ ಶಬ್ಧಗಳಿಂದ ನಿಂದಿಸಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಬಂದು ಆರೋಪಿತರ ಪೈಕಿ 1 ನೇ ಆರೋಪಿಯಾದ ನೀವು ಕೈಯಿಂದ ಚಾಸಾ-1 ರವರಿಗೆ ಹೊಡೆದು ಸಾಮಾನ್ಯ ಸ್ವರೂಪದ ಸ್ವ-ಇಚ್ಛಾ ಗಾಯವನ್ನುಂಟು ಮಾಡಿರುವ ಕಾರಣ, ಆರೋಪಿತರಾದ ನೀವುಗಳು **ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಬಂದು ಆರೋಪಿತರುಗಳ ಪೈಕಿ 1 ನೇ ಆರೋಪಿಯಾದ ನೀವು ಬಿದುರಿನ ದೊಣ್ಣೆಯನ್ನು ತೆಗೆದುಕೊಂಡು ಚಾಸಾ-1 ರವರ ಎಡಗೈನ ಭುಜಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಸ್ವ-ಇಚ್ಛಾ ಗಾಯವನ್ನುಂಟುಮಾಡಿರುವ ಕಾರಣ,

KACM210003472023

ಆರೋಪಿತರಾದ ನೀವುಗಳು **ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಬಂದು ಚಾಸಾ-1 ರವರನ್ನು ಕುರಿತು ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುವ ಕಾರಣ, ಆರೋಪಿತರಾದ ನೀವುಗಳು **ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆದ್ದರಿಂದ ನೀವುಗಳು ಮೇಲ್ಕಂಡ ದಂಡನೀಯ ಅಪರಾದಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ 17.11.2023

Sd/-

**(ಶ್ರೀಮತಿ ಸವಿತರಾಣಿ.ಹೆಚ್.ವಿ.)**
**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕಡೂರು.**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ಕಡೂರು**

**ಸಿಸಿ . ನಂ.146/2023**

ಫಿರ್ಯಾದಿ : ಪಂಚನಹಳ್ಳಿ ಪೋಲಿಸ್ ಠಾಣೆ

ವಿರುದ್ದ

1 ನೇ ಆರೋಪಿಯ ಹೆಸರು : ಟಿ.ಬಿ. ದಿನೇಶ್
ತಂದೆಯ ಹೆಸರು : ಬಸವರಾಜಪ್ಪ
ವಯಸ್ಸು : 36 ವರ್ಷ
ಉದ್ಯೋಗ : ವ್ಯವಸಾಯ ವೃತ್ತಿ
ವಾಸಃ : ತಿಮ್ಮಲಾಪುರ ಗ್ರಾಮ, ಕಡೂರು ತಾಲ್ಲೂಕು

**ದೋಷಾರೋಪಣೆ**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ 17.11.2023 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

Sd/-
(ಶ್ರೀಮತಿ ಸವಿತರಾಣಿ.ಹೆಚ್.ವಿ.)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಕಡೂರು.

1 ನೇ ಆರೋಪಿಯ ಸಹಿಃ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ಕಡೂರು**

**ಸಿಸಿ . ನಂ.146/2023**

ಫಿರ್ಯಾದಿ : ಪಂಚನಹಳ್ಳಿ ಪೋಲಿಸ್ ಠಾಣೆ

ವಿರುದ್ದ

2 ನೇ ಆರೋಪಿಯ ಹೆಸರು : ಟಿ.ಎನ್. ಚನ್ನಬಸಪ್ಪ
ತಂದೆಯ ಹೆಸರು : ನಾಗರಾಜಪ್ಪ
ವಯಸ್ಸು : 39 ವರ್ಷ
ಉದ್ಯೋಗ : ವ್ಯವಸಾಯ ವೃತ್ತಿ
ವಾಸಃ : ತಿಮ್ಮಲಾಪುರ ಗ್ರಾಮ, ಕಡೂರು ತಾಲ್ಲೂಕು

**ದೋಷಾರೋಪಣೆ**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ 17.11.2023 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

Sd/-
(ಶ್ರೀಮತಿ ಸವಿತರಾಣಿ.ಹೆಚ್.ವಿ.)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಕಡೂರು.

2 ನೇ ಆರೋಪಿಯ ಸಹಿಃ

**<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು</u>**

**<u>ಕಡೂರು</u>**

**<u>ಸಿಸಿ . ನಂ.146/2023</u>**

| | | |
|---|---|---|
| ಫಿರ್ಯಾದಿ | : | ಪಂಚನಹಳ್ಳಿ ಪೋಲಿಸ್ ಠಾಣೆ |

ವಿರುದ್ದ

| | | |
|---|---|---|
| 3 ನೇ ಆರೋಪಿಯ ಹೆಸರು | : | ಟಿ.ಯು.ರಮೇಶ್ |
| ತಂದೆ/ಗಂಡನ ಹೆಸರು | : | ಉಜ್ಜಿನಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ವ್ಯವಸಾಯ ವೃತ್ತಿ |
| ವಾಸಃ | : | ತಿಮ್ಮಲಾಪುರ ಗ್ರಾಮ, ಕಡೂರು ತಾಲ್ಲೂಕು |

**<u>ದೋಷಾರೋಪಣೆ</u>**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ 17.11.2023 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

Sd/-

(ಶ್ರೀಮತಿ ಸವಿತರಾಣಿ.ಹೆಚ್.ವಿ.)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಕಡೂರು.

3 ನೇ ಆರೋಪಿಯ ಸಹಿಃ

<u>Visit **ecourts.gov.in** for updates or download mobile app “**eCourts Services**” from Android or iOS</u>